| | | |
|---|---|---|
| ಅಭ್ಯಾಸ ಪತ್ರಿಕೆಯ ಸಂಖ್ಯೆ : WT_7S_4.2_DSERT | | ಕರ್ನಾಟಕ ಮಂಡಳಿ |
| ತರಗತಿ : 7 | ವಿಷಯ : ವಿಜ್ಞಾನ | ದಿನಾಂಕ : 18/07/2021 |
| ಅಧ್ಯಾಯದ ಕ್ರಮ ಸಂಖ್ಯೆ ಹಾಗು ಹೆಸರು : 4, ಉಷ್ಣ | | |
| ಉಪ ಅಧ್ಯಾಯ : ತಾಪದ ಅಳೆಯುವಿಕೆ, ತಾಪಮಾಪಕವನ್ನು ಓದುವುದು | | |
| | | |

| | |
|---|---|
| | ವಿಭಾಗ - **1** |
| ಪ್ರಶ್ನೆ 1 | ಈ ಹೇಳಿಕೆಗಳು ಸರಿಯಾಗಿದ್ದರೆ T ಎಂದು ಅಥವಾ ತಪ್ಪಾಗಿದ್ದರೆ F ಎಂದು ಗುರುತಿಸಿ. |
| (ಕ) | ತಾಪಮಾಪಕವು ತಾಪಮಾನವನ್ನು ಅಳತೆ ಮಾಡುತ್ತದೆ |
| ಉತ್ತರ | T |
| | |
| (ಖ) | ತಾಪಮಾಪಕವು ಎಂದು ಒಡೆಯುವುದಿಲ್ಲ. |
| ಉತ್ತರ | F<br>ಕಾರಣ : ತಾಪಮಾಪಕ ಗಾಜಿನಿಂದ ಮಾಡಲ್ಪಟ್ಟಿದೆ ಅದು ಕೆಳಗಡೆ ಬಿದ್ದಾಗ ಹೊಡೆಯಬಹುದು. |
| | |
| ಪ್ರಶ್ನೆ 2 | ಸರಿಯಾದ ಉತ್ತರವನ್ನು ಆರಿಸಿ.<br>ತಾಪಮಾಪಕದಲ್ಲಿ ಯಾವ ದ್ರವ ಲೋಹವನ್ನು ಬಳಸಲಾಗುತ್ತದೆ?<br>ಅ)ಸೋಡಿಯಂ ಆ)ಪಾದರಸ ಇ)ಗ್ಯಾಲಿಯಮ್ ಈ) ಇವುಗಳಲ್ಲಿ ಯಾವುದು ಅಲ್ಲ |
| ಉತ್ತರ | ಆ)ಪಾದರಸ |
| | |
| ಪ್ರಶ್ನೆ 3 | ಬಿಟ್ಟ ಸ್ಥಳಗಳನ್ನು ತುಂಬಿರಿ. |

| | |
|---|---|
| | ನಮ್ಮ ದೇಹದ ತಾಪವನ್ನು ಅಳೆಯುವ ಉಪಕರಣ______ ಆಗಿದೆ. |
| ಉತ್ತರ | ನಮ್ಮ ದೇಹದ ತಾಪವನ್ನು ಅಳೆಯುವ ಉಪಕರಣ ವೈದ್ಯಕೀಯ ತಾಪಮಾಪಕ ಆಗಿದೆ. |
| | |
| ವಿಭಾಗ - **2** | |
| ಪ್ರಶ್ನೆ 4 | ಮಾಹಿತಿಯನ್ನು ಬರೆದು ಈ ಹೇಳಿಕೆಗಳನ್ನು ಪೂರ್ಣಗೊಳಿಸಿ.<br>ಕ)ಬಳಸುವ ಮೊದಲು ಪಾದರಸದ ಮಟ್ಟ ____ಗಿಂತಲೂ ಕಡಿಮೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.<br>ಖ)ಮಾನವ ದೇಹದ ಸಾಮಾನ್ಯ ತಾಪಮಾನವು ______ಇರುತ್ತದೆ.<br>ಗ)ವೈದ್ಯಕೀಯ ತಾಪಮಾಪಕವು ತಾಪವನ್ನು ____ ಇಂದ ____ ವರೆಗೆ ಅಳೆಯುತ್ತದೆ. |
| ಉತ್ತರ | ಕ)ಬಳಸುವ ಮೊದಲು ಪಾದರಸದ ಮಟ್ಟ 35° C ಗಿಂತಲೂ ಕಡಿಮೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.<br>ಖ)ಮಾನವ ದೇಹದ ಸಾಮಾನ್ಯ ತಾಪಮಾನವು 37° C ಇರುತ್ತದೆ.<br>ಗ)ವೈದ್ಯಕೀಯ ತಾಪಮಾಪಕವು ತಾಪವನ್ನು 35 °C ಇಂದ 42°C ವರೆಗೆ ಅಳೆಯುತ್ತದೆ. |
| | |
| ಪ್ರಶ್ನೆ 5 | ವೈದ್ಯಕೀಯ ತಾಪಮಾಪಕ ಎಂದರೇನು? |
| ಉತ್ತರ | ನಮ್ಮ ದೇಹದ ತಾಪವನ್ನು ಅಳೆಯುವ ತಾಪಮಾಪಕವನ್ನು ವೈದ್ಯಕೀಯ ತಾಪಮಾಪಕ ಎನ್ನುವರು. |
| | |
| ವಿಭಾಗ - **3** | |
| ಪ್ರಶ್ನೆ 6 | ಪ್ರಯೋಗಶಾಲಾ ತಾಪಮಾಪಕ ಮತ್ತು ವೈದ್ಯಕೀಯ ತಾಪಮಾಪಕಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತಿಳಿಸಿ. |
| ಉತ್ತರ | ಪ್ರಯೋಗ ಶಾಲಾ ತಾಪಮಾಪಕ ಮತ್ತು ವೈದ್ಯಕೀಯ ತಾಪಮಾಪಕಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸ ಗಳನ್ನು ತಿಳಿಸಿ.<br>ಹೋಲಿಕೆಗಳು :<br>• ಎರಡೂ ತಾಪಮಾಪಕಗಳು ಉದ್ದವಾದ, ಕಿರಿದಾದ ಸಮಗಾತ್ರದ ಗಾಜಿನ ನಳಿಕೆಯನ್ನು ಹೊಂದಿರುತ್ತದೆ. |

| | |
|---|---|
| | • ಎರಡಕ್ಕೂ ಒಂದು ತುದಿಯಲ್ಲಿ ಗಾಜಿನ ಬುರುಡೆ ಇರುತ್ತದೆ.<br>• ಎರಡರಲ್ಲೂ ಪಾದರಸವಿರುತ್ತದೆ.<br>• ಎರಡರ ಮೇಲೂ ಸೆಲ್ಸಿಯಸ್ ಅಳತೆ ಪಟ್ಟಿ ಇದ್ದು ಅದನ್ನು °C ನಿಂದ ಸೂಚಿಸಿರುತ್ತಾರೆ.<br><br>ವ್ಯತ್ಯಾಸಗಳು :<br><br>• ವೈದ್ಯಕೀಯ ತಾಪಮಾಪಕದಲ್ಲಿ 35°C ಇಂದ 42°C ವರೆಗೆ ಸೂಚಿಸಿದ್ದರೆ ಪ್ರಯೋಗ ಶಾಲಾ ತಾಪಮಾಪಕದಲ್ಲಿ 10°C ಇಂದ 110°C ವರೆಗೆ ಸೂಚಿಸಿರುತ್ತಾರೆ.<br>• ವೈದ್ಯಕೀಯ ತಾಪಮಾಪಕದಲ್ಲಿ ಒಂದು ವಕ್ರತೆ ಇರುತ್ತದೆ. ಇದರಿಂದ ಪಾದರಸದ ಮಟ್ಟ ತಾನಾಗಿಯೇ ಕುಸಿಯುವುದಿಲ್ಲ. ಆದ್ದರಿಂದ ಉಷ್ಣತೆ ನೋಡುವಾಗ ಬಾಯಿಂದ ತೆಗೆದು ನೋಡಬಹುದು. ಆದರೆ ಪ್ರಯೋಗ ಶಾಲಾ ತಾಪಮಾಪಕದಲ್ಲಿ ಈ ವಕ್ರತೆ ಇರುವುದಿಲ್ಲ. |
| | |
| ಪ್ರಶ್ನೆ 7 | ನೀವು ತಾಪಮಾಪಕವನ್ನು ಹೇಗೆ ಓದುತ್ತೀರಾ ಎಂದು ವಿವರವಾಗಿ ವಿವರಿಸಿ. ಹಾಗೆ, ಒಂದು ವೈದ್ಯಕೀಯ ತಾಪಮಾಪಕವನ್ನು ಬಳಸುವಾಗ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಬರೆಯಿರಿ. |
| ಉತ್ತರ | ಮೊದಲು ತಾಪಮಾಪಕದ ಅಳತೆ ಪಟ್ಟಿಯ ಎರಡು ದೊಡ್ಡ ಗೆರೆಗಳ ನಡುವಿನ ತಾಪದ ವ್ಯತ್ಯಾಸವನ್ನು ಗುರ್ತಿಸಿಕೊಳ್ಳಿ ಹಾಗೂ ಇವುಗಳ ನಡುವಿನ ವಿಭಜನೆ (ಸಣ್ಣಗೆರೆ)ಗಳ ಸಂಖ್ಯೆಯನ್ನು ಬರೆದುಕೊಳ್ಳಿ, ದೊಡ್ಡಗೆರೆಗಳು ಒಂದು ಡಿಗ್ರಿಯನ್ನು ಅಳೆದರೆ ಅವುಗಳ ನಡುವೆ ಐದು ವಿಭಜನೆಗಳಿವೆ. ಒಂದು ಸಣ್ಣ ವಿಭಜನೆಯು 1/5 = 0.2"C ಅನ್ನು ಅಳೆಯಬಲ್ಲದು.<br><br>ವೈದ್ಯಕೀಯ ತಾಪಮಾಪಕವನ್ನು ಓದುವಾಗ ಗಮನಿಸಬೇಕಾದ ಮುನ್ನೆಚ್ಚರಿಕೆಗಳು<br><br>• ತಾಪಮಾಪಕದ ಬಳಕೆಗೆ ಮುನ್ನ ಮತ್ತು ನಂತರ ನಂಜು ನಿರೋಧಕ  ದ್ರಾವಣದಿಂದ ಅದನ್ನು ತೊಳೆಯಬೇಕು.<br>• ಬಳಸುವ ಮೊದಲು ಪಾದರಸದ ಮಟ್ಟ 35°C ಗಿಂತಲೂ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.<br>• ತಾಪಮಾಪಕವನ್ನು ಕಣ್ಣಿನ ದೃಷ್ಟಿಯ ನೇರದಲ್ಲಿ ಹಿಡಿದು ಪಾದರಸದ  ಮಟ್ಟವನ್ನು ಓದಬೇಕು.<br>• ತಾಪಮಾಪಕವನ್ನು ಓದುವಾಗ ಪಾದರಸದ ಬುರುಡೆಯನ್ನು ಹಿಡಿದುಕೊಳ್ಳಬಾರದು. |
| | |

eVidyaloka
To Educate - Anywhere Anytime

| | |
|---|---|
| | |
| | |
| | |
| | |
| | |
| | |
| | |
| | |
| | |
| | |
| | |

eVidyaloka
To Educate - Anywhere Anytime